CC 539/24

ಪಿಡಬ್ಲ್ಯೂ 2 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ **11-03-2025**

<u>ಪಾಟೀ ಸವಾಲು</u> ಃ ಆರೋಪಿ ಪರಃ ಶ್ರೀ ಎಮ್ ಐ ವಕೀಲರಿಂದಃ

ಅಪಘಾತ ನಡೆದ 2 ನಿಮಿಷದ ನಂತರ ನಾನು ಅಪಘಾತ ಸ್ಥಳಕ್ಕೆ ಹೋಗಿರುತ್ತೇನೆ. ಅಪಘಾತ ಸ್ಥಳದಿಂದ ನಾನು ಇದ್ದ ಸ್ಥಳಕ್ಕೆ 200 ಮೀ ದೂರ ಇತ್ತು. ಅಪಘಾತದ ಮುಂಚೆ ಅಪಘಾತ ಪಡಿಸಿದೆ ಎನ್ನಲಾದ ದ್ವಿಚಕ್ರ ವಾಹನ ನೋಡಿರುವುದಿಲ್ಲ. ಅಪಘಾತದಿಂದ ದ್ವಿಚಕ್ರ ವಾಹನ ಸವಾರ ಕೆಳಗೆ ಬಿದ್ದಿದ್ದು ತಕ್ಷಣ ಎದ್ದು ಬೈಕ್ ತೆಗೆದುಕೊಂಡು ಹೋಗಿರುತ್ತಾರೆ. ಸಹಸವಾರನಾಗಿ ಯಾರು ಇರಲಿಲ್ಲ. ದ್ವಿಚಕ್ರ ವಾಹನದ ಹೆಡ್ ಲೈಟ್ on ಇತ್ತು. ಮೃತ ಕುಟ್ಟಿ ದೇವಾಡಿಗರವರಿಗೆ ಯಾವ ರೀತಿಯಲ್ಲಿ ಅಪಘಾತವಾಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಮೊದಲಬಾರಿಗೆ ಸ್ಪಷ್ಟವಾಗಿ ನೋಡಿದ್ದು ನ್ಯಾಯಾಲಯದಲ್ಲಿ ಎಂದರೆ ಸಾಕ್ಷಿಯು ಅಪಪಘಾತ ಸ್ಥಳದಲ್ಲಿ ನೋಡಿರುತ್ತೇನೆ. ಅಪಘಾತ ಪಡಿಸಿದ ಬೈಕ್ ಅನ್ನು ಠಾಣೆಯಲ್ಲಿ ನೋಡಿರುವುದಿಲ್ಲ. ಚಾಸಾ 1 ರವರು ಅಪಘಾತ ಸ್ಥಳಕ್ಕೆ ಯಾವಾಗ ಬಂದಿರುತ್ತಾರೆ ಎಂದು ನೋಡಿರುವುದಿಲ್ಲ. ಮೃತ ಕುಟ್ಟಿ ದೇವಾಡಿಗ ರವರ ರಸ್ತೆಯ ಪಕ್ಕದಲ್ಲಿ ಬಿದ್ದಿದ್ದರು. ಅವರನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 3 ಜನ ಪೋಲಿಸರು ಮದ್ಯಾಹ್ನ ಸಮಯದಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ಪೋಲಿಸರು ಸ್ದಳಕ್ಕೆ ಬಂದಾಗ ನಾನು ಸ್ಥಳದಲ್ಲಿ ಇದ್ದೆ. ಪೋಲಿಸರು ಸ್ಥಳದಲ್ಲಿ ಅರ್ಧ ಗಂಟೆ ಹೆಚ್ಚು ಕಾಲ ಇದ್ದರು. ಸ್ಥಳಕ್ಕೆ ಲ್ಯಾಪ್ ಟಾಪ್

ತಂದಿರುವುದಿಲ್ಲ. ನನ್ನ ಸಮಕ್ಷಮ ಬರವಣಿಗೆ ಮಾಡಿ, ಭಾವಚಿತ್ರ ತೆಗೆದಿರುತ್ತಾರೆ. ಸದರಿ ದಾಖಲೆಗೆ ನಾನು ಸಹಿ ಹಾಕಿರುತ್ತಾರೆ. ಎಷ್ಟು ಸಹಿ ಹಾಕಿದ್ದೇನೆ ಎಂದು ನೆನಪಿಲ್ಲ. ಕುಟ್ಟಿ ದೇವಾಡಿಗ ರವರ ಮಗ ಬಂದು ಕೇಳಿಕೊಂಡ ಕಾರಣ ಸಹಿ ಹಾಕಿರುತ್ತೇನೆ. ಮಹಜರಿನಲ್ಲಿ ಏನೂ ಬರೆದಿದೆ ಎಂದು ಓದಿನೋಡಿರುತ್ತೀರಾ ಎಂದರೆ ನೆನಪಿಲ್ಲ. ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಭಾವಚಿತ್ರವನ್ನು ಮೊಬೈಲ್ ನಲ್ಲಿ ತೆಗೆದಿರುತ್ತಾರೆ. ಸ್ಥಳದಲ್ಲಿ ರಕ್ತದ ಕಲೆಗಳು ಇದ್ದವು. ಅಪಘಾತ ಸ್ಥಳ ರಾಜ್ಯ ಹೆದ್ದಾರಿ ಎಂದರೆ ಗೊತ್ತಿಲ್ಲ. ರಸ್ತೆಯ ಎರಡುಕಡೆ ಮಣ್ಣಿನ ರಸ್ತೆ ಇದೆ. ಚತುಷ್ಪತ ರಸ್ತೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಸಾಕಷ್ಟು ಅಪಘಾತ ನಡೆದಿದ್ದವು ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಜಿಬ್ರಾ ಕ್ರಾಸ್ ಇರುವುದಿಲ್ಲ. ಹಂಪ್ಸ, ಸ್ಪಿಡ್ ಬ್ರೇಕರ್ ಇಲ್ಲ. ಬೀದಿ ದೀಪ ಇರಲಿಲ್ಲ. ಸಾಮಾನ್ಯವಾಗಿ ವಾಹನ ಹೋಗುತ್ತಿರುವಾಗ ಒಮ್ಮೇಲೆ ಯಾರದರೂ ರಸ್ತೆ ದಾಟುತ್ತಿದ್ದರೆ ವಾಹನ ನಿಯಂತ್ರಿಸಲು ಆಗುವುದಿಲ್ಲ ಎಂದರೆ ಸರಿ. ಪೋಲಿಸರು ಯಾವುದೇ ಸ್ಥಳ ಮಹಜರು ಮಾಡಿ, ತಕ್ಷೀರಿಗೆ ಸಂಬಂಧಿಸಿದ ವಾಹನ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆ ಮತ್ತು ಮರುಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ, ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗಂತಿ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ